






## ಕಲಾ ತಪಸ್ಸಿನ ಕೂಸು ಕಪ್ಪೆಚಿಪ್ಪಿನ ಮ್ಯೂಸಿಯಂ

ಚಾಮುಂಡಿ ಬೆಟ್ಟದ ತಪ್ಪಲಲ್ಲಿ ಪ್ರವಾಸಿಗರನ್ನು ತನ್ನತ್ತ ಕೈ ಬೀಸಿ ಕರೆಯುವ ಸುಂದರವಾದ ಶಂಖ ಮತ್ತು ಕಪ್ಪೆಚಿಪ್ಪಿನ ಕಲಾಕೃತಿಗಳ ಮ್ಯೂಸಿಯಂ ಇದೆ. ಇಲ್ಲಿಗೆ ಮೈಸೂರು ನಗರ ಪ್ರದೇಶದಿಂದ ಮೂರೂವರೆ ಕಿಲೋಮೀಟರ್ ದೂರವಾಗುತ್ತದೆ. ಮುನ್ನೂರಕ್ಕೂ ಹೆಚ್ಚು ಕಲಾಕೃತಿಗಳನ್ನು ಒಳಗೊಂಡಿರುವ ಈ ಮ್ಯೂಸಿಯಂ ರಾಧಾ ಮಲ್ಲಪ್ಪ ಎಂಬುವವರ 40 ವರ್ಷಗಳ ಕಲಾ ತಪಸ್ಸಿನ ಕೂಸು. ದಿನನಿತ್ಯ ಕಸ ಸೇರುವ ವಸ್ತುಗಳಾದ ತಲೆಗೂದಲು, ಒಡೆದ ಗಾಜು, ಸಿಗರೇಟ್ ಪೇಪರ್, ಗೀರಿದ ಬೆಂಕಿಕಡ್ಡಿ, ಈರುಳ್ಳಿ, ಬೆಳ್ಳುಳ್ಳಿ, ಪಿಸ್ತಾ, ಕಡಲೆ, ಅಡಿಕೆ, ಮುಸುಕಿನ ಜೋಳ ಮುಂತಾದವುಗಳ ಸಿಪ್ಪೆಗಳಿಂದ ಮಾಡಿದ ಊಹಿಸಲು ಅಸಾಧ್ಯವಾದ ಹಲವು ಸುಂದರ ಕಲಾಕೃತಿಗಳು ಇಲ್ಲಿವೆ.

2016ರಲ್ಲಿ ಇಲ್ಲಿ ನಿರ್ಮಾಣಗೊಂಡ 11 ಅಡಿ ಎತ್ತರದ ಕಪ್ಪೆಚಿಪ್ಪಿನ ಗಣಪತಿಯು ‘ಗಿನ್ನೆಸ್ ಬುಕ್ ಆಫ್ ವರ್ಲ್ಡ್ ರೆಕಾರ್ಡ್’ ತನ್ನ ಮುಡಿಗೇರಿಸಿಕೊಂಡಿದೆ. ಮ್ಯೂಸಿಯಂನಲ್ಲಿನ ಇನ್ನೂ ಹಲವು ಕಲಾಕೃತಿಗಳನ್ನು ಸಂಪೂರ್ಣಗೊಳಿಸಲು ಸುಮಾರು 7 ರಿಂದ 8 ವರ್ಷಗಳನ್ನು ಕಲಾವಿದರು ತೆಗೆದುಕೊಂಡಿದ್ದಾರೆ ಎಂಬುದು ಕಲೆಯ ಮೇಲೆ ಅವರಿಗೆ ಇರುವ ಶ್ರದ್ಧೆ, ಪ್ರೀತಿಯನ್ನು ತೋರುತ್ತದೆ. ಕಲಾವಿದರ ತಾಳ್ಮೆಗೆ ಒಂದು ಸಲಾಂ ಎನ್ನಲೇಬೇಕು.

—ಮೆಲಿಷ್ಯಾ ಡಿಸೋಜಾ





## ಮ್ಯಾಸರಹಟ್ಟಿಯ ಬಳೆಗಳ ರಾಶಿ

ಈಗ ಸುಗ್ಗಿ ಸಮಯ. ಹಳ್ಳಿ ಕಡೆಗಳಲ್ಲಿ ಸಹಜವಾಗಿ ಜೋಳ, ರಾಗಿ, ಮೆಕ್ಕೆಜೋಳ, ಭತ್ತದ ರಾಶಿಗಳನ್ನು ಕಾಣುತ್ತೇವೆ. ಆದರೆ, ಚಿತ್ರದುರ್ಗ ಜಿಲ್ಲೆಯ ಮೊಳಕಾಲ್ಮೂರು ತಾಲ್ಲೂಕಿನ ರಾಯಪುರ ಗೇಟ್ ಸಮೀಪದ ಮ್ಯಾಸರಹಟ್ಟಿಗೆ ಹೋದರೆ ಅಲ್ಲೊಂದು ಬಳೆಗಳ ದೊಡ್ಡ ರಾಶಿಯನ್ನೇ ನೋಡಬಹುದು. ಈ ಚಿತ್ರದಲ್ಲಿ ಕಾಣುತ್ತಿರುವುದು ಕೇವಲ ಒಂದು ಬಳೆಯ ರಾಶಿಯಷ್ಟೆ. ಇದಕ್ಕಿಂತ ಕಡಿಮೆ ಪ್ರಮಾಣದ ಇನ್ನೆರಡು ರಾಶಿಗಳೂ ಇಲ್ಲಿವೆ. ಇವೆಲ್ಲ ಇಲ್ಲಿನ ಗ್ರಾಮ ದೇವತೆಯಾದ ಕೋಟೆ ಗುಡ್ಡ ಮಾರಮ್ಮಳಿಗೆ ಭಕ್ತರು ಹರಕೆಯ ರೂಪದಲ್ಲಿ ತೀರಿಸಿದ್ದವು. ದೇವಿ ತಮ್ಮ ಇಷ್ಟಾರ್ಥಗಳನ್ನು ನೆರವೇರಿಸಿದರೆ ಹಣಕ್ಕಿಂತ ಬಳೆ, ಗಂಟೆ, ಹೂವು ನೀಡುವುದು ಇಲ್ಲಿನ ಸಂಪ್ರದಾಯ. ಹೀಗಾಗಿ, ಗುಡಿಯ ಒಳಹೊರಗೆ ನೂರಾರು ಗಂಟೆ, ಬಳೆಗಳೇ ತುಂಬಿವೆ. ಹೆಚ್ಚಾದ, ಹಾಳಾದ ಬಳೆಗಳನ್ನು ಎಲ್ಲೆಂದರಲ್ಲಿ ಬಿಸಾಡದೆ ಹೀಗೆ ಒಂದೆಡೆ ಅಚ್ಚುಕಟ್ಟಾಗಿ ಹಾಕಿ, ರಾಶಿ ಮಾಡುವುದೂ ಒಳ್ಳೆಯದೆ. ಕೊಟ್ಟ ಭಕ್ತರಿಗೂ ನೆಮ್ಮದಿ. ಪರಿಸರ ಸ್ವಚ್ಛತೆಗೂ ಸಹಕಾರಿ.

—ಸ್ವರೂಪ್ ಕೊಟ್ಟೂರು, ವಿಜಯನಗರ